ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 508 ಮೈಅಪ್ರಾ 2010

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 30.09.2010

ಸುತ್ತೋಲೆ

ವಿಷಯ: ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವಾಗ ಪ್ರಾಧಿಕಾರಗಳು ಅನುಸರಿಸಬೇಕಾದ ಕ್ರಮದ ಬಗ್ಗೆ.

ಉಲ್ಲೇಖ: 1) ಸರ್ಕಾರದ ಸುತ್ತೋಲೆ ಸಂಖ್ಯೆವನಇ/234/ಟಿಟಿಪಿ/92 ದಿನಾಂಕ:18.1.1993,
2) ಸರ್ಕಾರದ ಪತ್ರದ ಸಂಖ್ಯೆ:ನಅಇ 328 ಭೂಬವಿ 97 ದಿನಾಂಕ;4.11.1997.
3) ನಗರ ಯೋಜನಾ ಇಲಾಖೆಯ ಸುತ್ತೋಲೆ ಸಂಖ್ಯೆ:ನಯೋ/ಉನಿ/ಯೋವಿ/ಭೂಉಬ/ಸುತ್ತೋಲೆ/2001-02 ದಿನಾಂಕ;27.08.2001,

****

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14 (ಎ)ರನ್ವಯ ಉದ್ಯಾನವನ ಹಾಗೂ ಬಯಲು ಜಾಗೆಗಳನ್ನು ಹಾಗೂ ಸಾರ್ವಜನಿಕ ಉದ್ದೇಶದ ಜಮೀನುಗಳನ್ನು ಇತರೆ ಉಪಯೋಗಗಳಿಗೆ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಗಳಿಗೆ ಉತ್ತೇಜನ ನೀಡಬಾರದೆಂದು ಉಲ್ಲೇಖ (1)ರ ಸರ್ಕಾರದ ಸುತ್ತೋಲೆಯಲ್ಲಿ ಹಾಗೂ ಉಲ್ಲೇಖ (2)ರ ಸರ್ಕಾರದ ಪತ್ರದಲ್ಲಿ ಕಟ್ಟುನಿಟ್ಟಿನ ನಿರ್ದೇಶನವನ್ನು ನೀಡಲಾಗಿತ್ತು. ಹಾಗೂ ಉಲ್ಲೇಖ(3)ರ ಸುತ್ತೋಲೆಯಲ್ಲಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುವಾಗ ಅನುಸರಿಸಬೇಕಾದ ಕ್ರಮದ ಬಗ್ಗೆ ಕೆಲವೊಂದು ಸೂಚನೆಗಳನ್ನು ನೀಡುತ್ತಾ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳ ಚೆಕ್‌ಲಿಸ್ಟ್‌ಗಳಲ್ಲಿ ಪೂರ್ಣ ವಿವರಗಳನ್ನೆ ನೀಡುವಂತೆ ಹಾಗೂ ಸಭೆಯ ನಿರ್ಣಯಗಳಲ್ಲಿ ಭೂ ಉಪಯೋಗ ಬದಲಾವಣೆಯನ್ನು ಯೋಜನಾ ದೃಷ್ಟಿಯಿಂದ ಪರಿಶೀಲಿಸಿ, ಭೂ ಉಪಯೋಗ ಬದಲಾವಣೆ ಶಿಫಾರಸ್ಸಿಗೆ ಸ್ಪಷ್ಟ ಕಾರಣಗಳನ್ನು ನೀಡುವಂತೆ ಸೂಚಿಸಲಾಗಿರುತ್ತದೆ. ನಗರೀಕರಣದ ಎಲ್ಲೆಯ ಹೊರಗೆ ಬರುವ ವ್ಯವಸಾಯ ಜಮೀನುಗಳ ಭೂ ಉಪಯೋಗ ಬದಲಾವಣೆ ಶಿಫಾರಸ್ಸು ಮಾಡುವಾಗ ಇಂತಹ ಜಮೀನುಗಳಿಗೆ ಪ್ರಾಧಿಕಾರವು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಾಧ್ಯತೆಯನ್ನು ಪರಿಶೀಲಿಸಿ ಶಿಫಾರಸ್ಸು ಮಾಡಲು ಸಹ ಸೂಚಿಸಲಾಗಿರುತ್ತದೆ. ಆದಾಗ್ಯೂ ಸಹ ಪ್ರಾಧಿಕಾರಿಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಡಿ ಉದ್ಯಾನವನ ಬಯಲು ಜಾಗೆಗಳ ಹಾಗೂ ಸಾರ್ವಜನಿಕ ಉಪಯೋಗದ ಜಮೀನುಗಳ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸುತ್ತಿದ್ದು, ನಗರದ ಹೊರವಲಯದಲ್ಲಿನ ವ್ಯವಸಾಯ ಜಮೀನುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಸಾಧ್ಯವಾಗುವ ಬಗ್ಗೆ ಪರಿಶೀಲಿಸದೆ ಹೊರ ವಲಯಗಳಲ್ಲಿ ಒಂಟಿ ಬೆಳವಣಿಗೆಗಳನ್ನು ಪ್ರೋತ್ಸಾಹಿಸುತ್ತಾ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಈ ರೀತಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಗಳನ್ನು ಪರಿಗಣಿಸಿದ ಪಕ್ಷವಲ್ಲಿ, ಬೆಳವಣಿಗೆಗಳು ಯೋಜನಾ ಬದ್ಧವಾಗಿ ಬರಲೆಂದು ತಯಾರಿಸಲಾದ ಮಹಾ ಯೋಜನೆ ತಯಾರಿಕೆಯ ಮೂಲ ಉದ್ದೇಶವೇ ಈಡೇರಿದಂತಾಗುವುದಿಲ್ಲ.,

ಆದ್ದರಿಂದ, ಪ್ರಾಧಿಕಾರಗಳ ಇನ್ನು ಮುಂದೆ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚನೆಯನ್ನು ನೀಡುತ್ತಾ, ಉದ್ಯಾನವನ/ ಬಯಲು ಜಾಗೆಗಳ ಹಾಗೂ ಸಾರ್ವಜನಿಕ ಉಪಯೋಗದ ಜಮೀನುಗಳ ಭೂ ಉಪಯೋಗ ಪ್ರಸ್ತಾವನೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಡಿ ಸಲ್ಲಿಸಬಾರದೆಂದು ಹಾಗೂ ವ್ಯವಸಾಯ ವಲಯದಲ್ಲಿನ ಜಮೀನುಗಳ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಗಳನ್ನು ಸಲ್ಲಿಸುವಾಗ, ಈ ಜಮೀನುಗಳಿಗೆ ಸ್ಥಳೀಯ ಸಂಸ್ಥೆಯಿಂದ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಸಾಧ್ಯವಿರುವ ಬಗ್ಗೆ ಖಚಿತಪಡಿಸಿಕೊಂಡು, ಒಂಟಿ ಬೆಳವಣಿಗೆಗಳಿಗೆ ಅವಕಾಶ ಕಲ್ಪಿಸದೇ ಇರುವ ಬಗ್ಗೆ ಸಭೆ ನಡವಳಿಗಳಲ್ಲಿ ಮತ್ತು ಭೂ ಉಪಯೋಗ ಬದಲಾವಣೆ ಪರಿಶೀಲನಾ ಪಟ್ಟಿಯಲ್ಲಿ

ನಗರ ಯೋಜನಾ ಸದಸ್ಯರು ಮತ್ತು ಆಯುಕ್ತರ ಸ್ಪಷ್ಟ ಅಭಿಪ್ರಾಯದೊಂದಿಗೆ ಸೂಕ್ತ ಪ್ರಸ್ತಾವನೆಗಳನ್ನು ಮಾತ್ರ ಸರ್ಕಾರಕ್ಕೆ ಸಲ್ಲಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಮೇಲ್ಕಂಡ ಸೂಚನೆಗಳಿಗೆ ವ್ಯತಿರಿಕ್ತವಾಗಿ ಪ್ರಸ್ತಾವನೆಗಳನ್ನು ಸ್ವೀರಿಸಿದಲ್ಲಿ ಅಂತಹ ನಗರ ಯೋಜನಾ ಸದಸ್ಯರು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರನ್ನೇ ಹೊಣೆಗಾರರನ್ನಾಗಿ ಮಾಡಿ ಶಿಸ್ತಿನ ಕ್ರಮ ಜರುಗಿಸಲಾಗುತ್ತದೆ ಎಂಬುದಾಗಿ ಸ್ಪಷ್ಟಪಡಿಸಿದೆ.

ಮುನ್ನುಡಿ 30/9/10

(ಎಂ.ಎಂ.ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1) ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು.
2) ಎಲ್ಲಾ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಎಲ್ಲಾ ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ ಹಾಗೂ ಮುಖ್ಯಾಧಿಕಾರಿಗಳ, ಪುರಸಭೆ ಯೋಜನಾ ಪ್ರಾಧಿಕಾರ.
3) ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಧಾನ ಸೌಧ.
4) ಅಪರ ಮುಖ್ಯ ಕಾರ್ಯದರ್ಶಿಗಳ ನಗರಾಭಿವೃದ್ಧಿ ಇಲಾಖೆ ಆಪ್ತ ಕಾರ್ಯದರ್ಶಿಗಳು,
5) ಸರ್ಕಾರದ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಆಪ್ತ ಕಾರ್ಯದರ್ಶಿಗಳು,
6) ಸರ್ಕಾರದ ಉಪಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಆಪ್ತ ಸಹಾಯಕರು
7) ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿಗಳು.